## ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ.ದಂ.ನ್ಯಾಯಾಲಯ, ಶಹಾಪೂರ

CW 6 PW -9

ಸಿ.ಸಿ. ನಂ. 59/2021

| | | |
|---|---|---|
| ಹೆಸರು | ಃ | ಪರಶುರಾಮ |
| ತಂದೆಯ ಹೆಸರು | ಃ | ಸುಭಾಶ್ಚಂದ್ರ |
| ವಯಸ್ಸು | ಃ | 30 ವರ್ಷ |
| ಉದ್ಯೋಗ | ಃ | ಕೃಷಿ ಅಧಿಕಾರಿ |
| ವಾಸ | ಃ | ಗೋಗಿ. |

**ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು ದಿನಾಂಕಃ 23-02-2026.**

**ಮುಖ್ಯ ವಿಚಾರಣೆ ಃ ಸಹಾಯಕ ಸರಕಾರಿ ಅಭಿಯೋಜಕರವರಿಂದ ಃ**

ನನಗೆ ಚಾಸಾ1 ರವರ ಪರಿಚಯ ಇರುತ್ತದೆ. ನನಗೆ ಚಾಸಾ-2 ರಿಂದ 5 ಹಾಗೂ 7 ರಿಂದ 14 ರವರ ಪರಿಚಯ ಇರುತ್ತದೆ. ನನಗೆ

2. ದಿಃ 15-08-2020 ರಂದು ನಮ್ಮ ಕಚೇರಿಯಲ್ಲಿ ದ್ವಜಾರೋಹನಾ ಮಾಡಿ ನಾವು ಮರಳಿ ಸಾಯಂಕಾಲ 4 ರಿಂದ 4.30 ರ ಸಮಯಕ್ಕೆ ದ್ವಜ ಇಳಿಸುವ ಕುರಿತು ನಾನು ಹಾಗೂ ಚಾಸಾ1 ರವರು ನಮ್ಮ ಕಚೇರಿಗೆ ಹೋಗಿತ್ತಿದ್ದೇವು. ನಮ್ಮ ಸದರಿ ಕಚೇರಿಗೆ ಹೋರಟಾಗ ಚಾಸಾ1 ರವರಿಗೆ ಮುಡಬೂಳ ಕಡೆಯಿಂದ ಶಹಾಪೂರ ಕಡೆಗೆ ಒಂದು ಲಾರಿ ನಂಬರ MH-13-R-3613 ರಲ್ಲಿ ನಕಲಿ ಗೊಬ್ಬರವನ್ನು ಲೋಡ ಮಾಡಿಕೊಂಡು ಹೋಗಲಾಗುತ್ತಿದೆ ಎಂದು ಭಾತ್ಮಿ ಬಂದಿರುತ್ತದೆ. ಚಾಸಾ1 ರವರು ತಮಗೆ ಬಂದಂತಹ ಸದರಿ ಭಾತ್ಮಿಯನ್ನು ನಮ್ಮ ಹಿರಿಯ ಅಧಿಕಾರಿಗಳಿಗೆ ತಿಳಿಸಿರುತ್ತಾರೆ. ನಮ್ಮ ಹಿರಿಯ ಅಧಿಕಾರಿಗಳು ಚಾಸಾ7 ರವರ ಜೊತೆಗೆ ಮಾತನಾಡಿರುತ್ತಾರೆ. ನಂತರ ನಾನು ಹಾಗೂ ಚಾಸಾ1 ರವರು ಭೀಗುಡಿ ಠಾಣೆಗೆ ಹೋಗಿರುತ್ತೇವೆ. ನಂತರ ನಾನು, ಚಾಸಾ2 ರಿಂದ 5 ಹಾಗೂ 7 ರಿಂದ 11 ರವರು ಸೇರಿ ಸಾಯಂಕಾಲ 5.00 ಗಂಟೆಗೆ ಕೋಡಮನಳ್ಳಿ

ಕ್ರಾಸನ ಹತ್ತಿರ ಹೋಗಿರುತ್ತೇವೆ. ಸದರಿ ದಿನದಂದು ಸಾಯಂಕಾಲ 5.30 ರ ಸಮಯದಲ್ಲಿ ನಾವು ಕೋಡಮನಳ್ಳಿ ಕ್ರಾನ ಹತ್ತಿರ ಇದ್ದಾಗ ಒಂದು ಲಾರಿ ಬಂದಿರುತ್ತದೆ. ಸದರಿ ಲಾರಿಯನ್ನು ತಡೆದು ಪೊಲೀಸರಿಗೆ ಲಾರಿಯ ಚಾಲಕನ ಹೆಸರು ಕೇಳಲಾಗಿ ಅವರು ಅಮರೇಶ ತಂದೆ ಹನಮಂತ್ರಾಯ ನಾಟೇಕಾರ ಎಂದು ತಿಳಿಸಿರುತ್ತಾರೆ. ಸದರಿ ಚಾಲಕನಿಗೆ ಸದರಿ ರಸಗೊಬ್ಬರದ ಬಿಲ್ಲನ್ನು ಕೇಳಿದಾಗ ಅವರ ಹತ್ತಿರ ಇರಲಿಲ್ಲ. ಸದರಿ ರಸಗೊಬ್ಬರವನ್ನು ಮೂಡಬುಳ ಗ್ರಾಮದಲ್ಲಿನ ಮಲ್ಲಿನಾಥ ದ್ಯಾಮಗೊಂಡ ಇವರಿಗೆ ಕೊಡಲು ಹೋಗಿದ್ದು ಆದರೆ ಅವರಿಗೆ ಯಾವುದೇ ರಶೀದಿ ಕೊಡದ ಕಾರಣ ಅವರಿಗೆ ಸಂಶಯ ಬಂದು ಅದನ್ನು ತೆಗೆದುಕೊಳ್ಳದ ಕಾರಣ ಅದನ್ನು ವಾಪಾಸ್ಸು ತೆಗೆದುಕೊಂಡು ಹೋಗಲಾಗುತ್ತಿತ್ತು. ಸದರಿ 298 ಗೊಬ್ಬರದ ಚೀಲಗಳಿದ್ದು ಅವುಗಳ ಒಟ್ಟು ಬೆಲೆ ರೂ.3,73,990/- ಆಗಿತ್ತು. ನಂತರ ನಾವು ಸದರಿ ರಸಗೊಬ್ಬರದ ಚೀಲ ಹಾಗೂ ಲಾರಿಯನ್ನು ಭೀ ಗುಡಿ ಠಾಣೆಗೆ ತೆಗೆದುಕೊಂಡು ಹೋಗಿರುತ್ತೇವೆ. ಸದರಿ ಚಾಲಕನ ಮೂಲಕ ಇನ್ನಿತರ ಆರೋಪಿತರ ಬಗ್ಗೆ ತಿಳಿದು ಬಂದಿರುತ್ತದೆ. ಸದರಿ ಉಳಿದ ಮೂರು ಆರೋಪಿರಾದ ಸುಜಾತಾ, ಹನಮಂತ್ರಾಯ ಹಾಗೂ ರಘು ದೇಸಾಯಿ ಇವರನ್ನು ವಿಚಾರಿಸಿದಾಗ ಅವರು ಬೇರೆ ಕಡೆಯಿಂದ ರಸಗೊಬ್ಬರವನ್ನು ತರಿಸಿ ಚೀಲಗಳಲ್ಲಿ ಹಾಕಿ ಹೊಲೆದು ಬೇರೆ ಬೇರೆ ಕಡೆಗೆ ಮಾರಾಟ ಮಾಡುವುದಾಗಿ ತಿಳಿಸಿರುತ್ತಾರೆ. ನಾನು ಈ ಕುರಿತಂತೆ ನಾನು ನನ್ನ ಹೇಳಿಕೆ ಹಾಗೂ ಮರು ಹೇಳಿಕೆಯನ್ನು ಪೊಲೀಸರಿಗೆ ನೀಡಿರುತ್ತೇನೆ. ನಾವು ಸದರಿ 294 ಚೀಲಗಳಿಂದ ರ random 500 ಗ್ರಾಂ ದಾಸ್ತಾನನ್ನು ರಾಸಾಯನಿಕ ಪರೀಕ್ಷೆಗಾಗಿ ಬೆಳಗಾವಿಯಲ್ಲಿರುವ ನಮ್ಮ fertilizer controller laboratory ಗೆ ಕಳುಹಿಸಿರುತ್ತೇನೆ. ಸದರಿ ಎಲ್ಲಾ ಚೀಲಗಳನ್ನು ಹಾಗೂ ಲಾರಿಯನ್ನು ಅಮಾನತ್ತುಪಡಿಸಿಕೊಂಡಿದ್ದು ಆಗ ಸಮಯ ಸಾಯಂಕಾಲ 6.30 ರಿಂದ 6.45 ಆಗಿತ್ತು. ಸಾಕ್ಷಿಯು ಈ ದಿನ ನ್ಯಾಯಾಲಯದ ಮುಂದೆ ಹಾಜರಿರುವ 1 ಮತ್ತು 2 ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಸದರಿ ಲಾರಿಗಳ ಪೊಟೋಗಳನ್ನು

ನೋಡಿ ಗುರುತಿಸಿರುತ್ತಾರೆ. ಸದರಿ ಲಾರಿಗಳ ಪೊಟೋಗಳನ್ನು ಈಗಾಗಲೇ ನಿಪಿ.3 ಮತ್ತು 4 ಎಂದು ಗುರುತಿಸಲಾಗಿರುತ್ತವೆ.

**ಪಾಟಿ ಸವಾಲು 2 ನೇ ಆರೋಪಿಯ ಪರವಾಗಿ ಶ್ರೀ TN ಮಾನ್ಯ ವಕೀಲರಿಂದ:-**

3. ದಿಃ 15-08-2020 ರಂದು ನನಗೆ ಕಚೇರಿ ಕರ್ತವ್ಯಕ್ಕೆ ನಿಯೋಜಿಸಲಾಗಿತ್ತು. ನಾನು ಸದರಿ ದಿನದಂದು ಕರ್ತವ್ಯದಲ್ಲಿದ್ದೆ ಎಂದು ಹೇಳಲು ತನಿಖಾಧಿಕಾರಿಗಳಿಗೆ ನನ್ನ attendance certificate ನ್ನು ಕೊಟ್ಟಿರುವುದಿಲ್ಲ. ನಾನು ಹಾಗೂ ಚಾಸಾ1 ರವರು ಒಂದೇ ಕಡೆ ಗೋಗಿಯಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತೇವೆ. ಘಟನೆ ನಡೆದಿದೆ ಎಂದು ಹೇಳುವ ದಿನಾಂಕದಂದು ನಾನು ಗೋಗಿಯಲ್ಲಿ ಕರ್ತವ್ಯವನ್ನು ನಿರ್ವಹಿಸತ್ತಿದ್ದೆ ಎಂದರೆ ಸರಿ. ನನ್ನ ಹಾಗೂ ಚಾಸಾ1 ರವರ ಮನೆ ಶಹಾಪೂರಿನಲ್ಲಿರುತ್ತವೆ. ಸದರಿ ದಿನದಂದು ನಾನು ಹಾಗೂ ಚಾಸಾ1 ರವರು ಧ್ವಜಾರೋಹನವನ್ನು ಮಾಡಲು ಗೋಗಿಯಲ್ಲಿರುವ ನಮ್ಮ ಕಚೇರಿಗೆ ಚಾಸಾ1 ರವರಿಗೆ ಸಂಬಂಧಿಸಿದ ಮೋಟಾರ ಸೈಕಲ್ ಮೇಲೆ ಹೋಗಿರುತ್ತೇವೆ. ಸದರಿ ಮೋಟಾರ ಸೈಕಲ ನಂಬರ ನನಗೆ ಗೊತ್ತಿರುವುದಿಲ್ಲ. ಸದರಿ ದಿನದಂದು ಗೋಗಿಗೆ ಹೋಗುವಾಗ ಸದರಿ ಮೋಟಾರ ಸೈಕಲನ್ನು ಚಾಸಾ1 ರವರು ಓಡಿಸಿರುತ್ತಾರೆ.

4. ನಾನು ಹಾಗೂ ಚಾಸಾ1 ರವರು ಸದರಿ ದಿನಂದಂದು ಸಾಯಂಕಾಲ ಧ್ವಜಾ ಇಳಿಸುವ ಕುರಿತು ಶಹಾಪೂರದಿಂದ ಗೋಗಿಗೆ ಹೋಗುತ್ತಿದ್ದೇವು. ಸದರಿ ದಿನದಂದು ನಮ್ಮ ಮೇಲಾಧಿಕಾರಿಗಳಾದ ಗೌತಮ್ ವಾಗ್ಮೋರೆ ಇವರು ಶಹಾಪೂರಿದಲ್ಲಿದ್ದರು. ನಾನು ನನ್ನ ಹೇಳಿಕೆಯಲ್ಲಿ ಸದರಿ ದಿನದಂದು ಸದರಿ ಗೌತಮ್ ವಾಗ್ಮೋರೆ ಇವರು ಶಹಾಪೂರಿನಲ್ಲಿದ್ದರು ಎಂದು ಹೇಳಿ ಬರೆಸಿರುವುದಿಲ್ಲ. ಸದರಿ ಗೌತಮ್ ವಾಗ್ಮೋರೆ ಇವರು ಚಾಸಾ1 ರವರಿಗೆ ಪೋನ್ ಮಾಡಿರುತ್ತಾರೆ. ನನಗೆ ಚಾಸಾ1 ಮತ್ತು ಗೌತಮ್ ವಾಗ್ಮೋರೆ ಇವರ ಪೋನ ನಂಬರ ಗೊತ್ತಿರುವುದಿಲ್ಲ. ಸಾಕ್ಷಿ ಮುಂದುವರೆದು, 9902876798 ಇದು ಚಾಸಾ1 ರವರ ಮೊಬೈಲ್ ಸಂಖ್ಯೆ ಆಗಿರುವುದಾಗಿ ಹೇಳುತ್ತಾರೆ.

ನನಗೆ ಸದರಿ ಗೌತಮ್ ವಾಗ್ಮೋರೆ ಇವರ ಮೊಬೈಲ ನಂಬರ ನೆನಪಿರುವುದಿಲ್ಲ. ನಾನು ನನ್ನ ಹೇಳಿಕೆಯಲ್ಲಿ ಚಾಸಾ1 ರವರ ಹಾಗೂ ಸದರಿ ಗೌತಮ್ ವಾಗ್ಮೋರೆ ಇವರ ಮೊಬೈಲ್ ನಂಬರಗಳನ್ನು ನಮೂದು ಮಾಡಿರುವುದಿಲ್ಲ. ಚಾಸಾ1 ರವರು ಕೃಷಿ ಅಧಿಕಾರಿಯಾಗಿದ್ದು ಹಾಗೂ ನಾನು ಸಹಾಯಕ ಕೃಷಿ ಅಧಿಕಾರಿಯಾಗಿದ್ದು ಇಬ್ಬರು ಒಟ್ಟಿಗೆ ಕೆಲಸ ಮಾಡುತ್ತೇವೆ ಎಂದರೆ ಸರಿ. ಸದರಿ ಗೌತಮ್ ವಾಗ್ಮೋರೆ ಇವರು ಚಾಸಾ1 ರವರಿಗೆ ಕರೆ ಮಾಡಿ ಮೂಡಬುಳ ಗ್ರಾಮದಿಂದ ಶಹಾಪೂರ ಕಡೆಗೆ ಒಂದು ಲಾರಿ ಬರುತ್ತಿದ್ದು ಅದರಲ್ಲಿ ರಸಗೊಬ್ಬರ ಇದ್ದು ಅದಕ್ಕೆ ಯಾವುದೇ ರಶೀದಿಗಳು ಇರುವುದಿಲ್ಲ ಎಂದು ಹೇಳಿರುತ್ತಾರೆ ಹಾಗೂ ವಿಚಾರ ಮಾಡಲು ಹೇಳಿರುತ್ತಾರೆ. ಸದರಿ ದಿನದಂದು ಸದರಿ ಗೌತಮ್ ವಾಗ್ಮೋರೆ ಇವರು ಚಾಸಾ1 ರವರಿಗೆ ಸಾಯಂಕಾಲ 04.45 ಕ್ಕೆ ಕರೆ ಮಾಡಿದ್ದು ಆಗ ನಾನು ಹಾಗೂ ಚಾಸಾ1 ರವರು  ಭೀ ಗುಡಿಯ forest department ಕಚೇರಿಯ ಹತ್ತಿರ ಇದ್ದೇವು. ಸದರಿ ಗೌತಮ್ ವಾಗ್ಮೋರೆ ಇವರು ನಮಗೆ ಯಾವುದೇ ಆದೇಶ ಮಾಡಿರುವುದಿಲ್ಲ ಆದರೆ ನಿರ್ದೇಶನ ಕೊಟ್ಟಿರುತ್ತಾರೆ. ನಾವುಗಳು ಸದರಿ ಗೌತಮ ಇವರ ಕರೆಯ ಮೇರೆಗೆ ಸದರಿ ಸ್ಥಳಕ್ಕೆ ಹೋಗಿರುತ್ತೇವೆ. ಆದರೆ ಆದೇಶದ ಮೇರೆಗೆ ಅಲ್ಲ. ನಾನು ನನ್ನ ಹೇಳಿಕೆಯಲ್ಲಿ ಸದರಿ ಗೌತಮ ಇವರ ಆದೇಶದ ಮೇರೆಗೆ ಎಂದು ಹೇಳಿದ್ದು ಅದು ತಪ್ಪಾಗಿರುತ್ತದೆ.

5. ಸದರಿ ಪೋನ ಕರೆ ಬಂದ ನಂತರ ನಾನು ಹಾಗೂ ಚಾಸಾ1 ರವರು ಸಾಯಂಕಾಲ 04.45 ಕ್ಕೆ ಭೀ ಗುಡಿ ಠಾಣೆಗೆ ಹೋಗಿರುತ್ತೇವೆ. ನಾವು ಠಾಣೆಗೆ ಹೋದಾಗ ಚಾಸಾ7 ರಿಂದ 10 ಹಾಜರಿದ್ದರು ಹಾಗೂ ಚಾಸಾ7 ರವರು ಚಾಸಾ2 ಮತ್ತು 3 ರವರನ್ನು ಕರೆಸಿರುತ್ತಾರೆ. ನಾವುಗಳು ಸದರಿ ಠಾಣೆಗೆ ಹೋದ ನಂತರ ಚಾಸಾ7 ರವರು ಚಾಸಾ2 ಮತ್ತು 3 ರವರನ್ನು ಕರೆಸಿರುತ್ತಾರೆ. ಚಾಸಾ7 ರವರು ಚಾಸಾ2 ಮತ್ತು 3 ರವರನ್ನು ಪೋನಿನ ಮುಖಾಂತರ ಕರೆಸಿರುತ್ತಾರೆ. ಸದರಿ ಪಂಚರೆಂದರೆ ಶ್ರೀ ಚನ್ನಪ್ಪಗೌಡ ಹಾಗೂ ಶ್ರೀ ಅಮರೇಶ ತಂದೆ ಶರಣಪ್ಪ. ಸದರಿ ಪಂಚರನ್ನು ಚಾಸಾ7 ರವರು ನನ್ನ ಸಮಕ್ಷಮ ವಿಚಾರಣೆ ಮಾಡಿರುವುದಿಲ್ಲ. ಭೀಮರಾಯಣಗುಡಿಯಿಂದ ಕೋಡಮನಳ್ಳಿ ಗ್ರಾಮಕ್ಕೆ

ಸುಮಾರು 8 ಕಿ.ಮಿ. ಅಂತರ ಇರುತ್ತದೆ. ಸದರಿ ಸ್ತಳ ರಾಜ್ಯ ಹೆದ್ದಾರಿಯಾಗಿದ್ದು ಸಾಕಷ್ಟು ವಾಹನಗಳು ಓಡಾಡುತ್ತಿರುತ್ತವೆ ಎಂದರೆ ಸರಿ. ಸದರಿ ದಿನದಂದು ನಾನು ಚಾಸಾ7 ರವರ ಖಾಸಾಗಿ ವಾಹನ ಕಾರಿನಲ್ಲಿ ಸ್ತಳಕ್ಕೆ ಹೋಗಿರುತ್ತೇವೆ. ಸದರಿ ಕಾರಿನ ನಂಬರ ಹಾಗೂ ಅದರ ಮಾಲಿಕರು ಯಾರು ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಕಾರು ಯಾವ ಕಂಪನಿಯದಾಗಿತ್ತು ಎಂದು ನನಗೆ ಗೊತ್ತಿರುವುದಿಲ್ಲ. ನಾನು ನನ್ನ ಹೇಳಿಕೆ ಹಾಗೂ ಮರು ಹೇಳಿಕೆಯಲ್ಲಿ ಸದರಿ ದಿನದಂದು ಖಾಸಗಿ ಕಾರಿನಲ್ಲಿ ಸ್ತಳಕ್ಕೆ ಹೋಗಿರುತ್ತೇನೆ ಎಂದು ನಮೂದು ಮಾಡಿರುವುದಿಲ್ಲ. ಸದರಿ ದಿನದಂದು ಸ್ತಳಕ್ಕೆ ಒಟ್ಟು 7 ಜನ ಹೋಗಿರುತ್ತೇವೆ. ನಾವು 7 ಜನ ಬಿಟ್ಟರೇ ಸ್ತಳದಲ್ಲಿ ಬೇರೆ ಯಾರು ಇರಲಿಲ್ಲ. ಸದರಿ ಕೊಡಮನಳ್ಳಿ ಕ್ರಾಸ ಹತ್ತಿರ ಯಾವುದೇ ಹೊಟೇಲ್ ಹಾಗೂ ಅಂಗಡಿ ಇರುವುದಿಲ್ಲ. ಸದರಿ ಕೋಡಹನಳ್ಳಿ ಕ್ರಾಸ ಯಾವ ದಿಕ್ಕಿಗೆ ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ.

6. ನಾವುಗಳು ಸದರಿ ದಿನದಂದು ಸದರಿ ಲಾರಿ ಬರುವುದನ್ನು 100 ಅಥವಾ 200 ಮೀಟರ ಅಂತರದಿಂದ ನೋಡಿರುತ್ತೇವೆ. ಸದರಿ ಲಾರಿಯನ್ನು ಮೊದಲು ನಾನು ಹಾಗೂ ಚಾಸಾ1 ರವರು ನೋಡಿ ನಿಲ್ಲಿಸಿರುತ್ತೇವೆ. ನಾವು ಸದರಿ ಲಾರಿಯನ್ನು ನಿಲ್ಲಿಸಿ ಅದರ ಚಾಲಕನನ್ನು ಕೇಳಿದ ನಂತರ ಪೊಲೀಸರು ಸ್ತಳಕ್ಕೆ ಬಂದಿರುತ್ತಾರೆ. ಸದರಿ ದಿನದಂದು ಸದರಿ ಲಾರಿಯ ಚಾಲಕ ಯಾವ ಬಣ್ಣದ ಅಂಗಿಯನ್ನು ಹಾಕಿದ್ದರು ಎಂದರೆ ನನಗೆ ನೆನಪಿರುವುದಿಲ್ಲ. ಸದರಿ ಲಾರಿಯ ಮೇಲೆ ತಾಡಪತ್ರೆಯನ್ನು ಹಾಕಿ ಮುಚ್ಚಿದ್ದು ಹಾಗೂ ಹಗ್ಗದಿಂದ ಕಟ್ಟಲಾಗಿತ್ತು ಎಂದರೆ ಸರಿ. ಸದರಿ ತಾಡಪತ್ರೆಯನ್ನು ಹಾಗೂ ಅದಕ್ಕೆ ಕಟ್ಟಿದ ಹಗ್ಗವನ್ನು ಸದರಿ ಲಾರಿಯ ಚಾಲಕ ತೆಗೆದಿರುತ್ತಾರೆ. ಸದರಿ ಚಾಲಕ ಮೂಡಬುಳ ಗ್ರಾಮದವರಾಗಿರುತ್ತಾರೆ. ನಾನು ಸದರಿ ಚೀಲಗಳನ್ನು ಏಣಿಸಿರುವುದಿಲ್ಲ ಆದರೆ ಸದರಿ ಚಾಲಕ ಎಷ್ಟು ಚೀಲಗಳು ಇರುತ್ತವೆ ಎಂದು ಹೇಳಿರುತ್ತಾರೆ. ಸದರಿ ಚೀಲಗಳನ್ನು ಚೆಕ್ ನಾನೇ ಮಾಡಿರುತ್ತೇನೆ. ಸದರಿ ಲಾರಿಯ ಹಿಂಭಾಗದಿಂದ ಒಂದು ಚೀಲವನ್ನು ತೆಗೆದುಕೊಂಡು ನೋಡಿರುತ್ತೇನೆ. ಸದರಿ ಚೀಲಗಳ ಮೇಲೆ ನಂಬರ ಇರಲಿಲ್ಲ ಆದರೆ

ಕಂಪನಿಯ ಹೆಸರು ಮತ್ತು contents, 18460 DAP ಎಂದು ನಮೂದಾಗಿದ್ದು ಹಾಗೂ ಅವುಗಳ ಮೇಲೆ quantity 50 KG ಎಂದು ನಮೂದಾಗಿದ್ದವು. ನಾನು ಸದರಿ ಚೀಲಗಳನ್ನು ತೂಕ ಮಾಡಿರುವುದಿಲ್ಲ. ಸ್ಥಳದಲ್ಲಿ ನಾನು ಸದರಿ ಲಾರಿಯಲ್ಲಿದ ಚೀಲಗಳನ್ನು ಏಣಿಸಿರುವುದಿಲ್ಲ. ಸದರಿ ಚೀಲಗಳ ಮೇಲೆ ಅವುಗಳ ಬೆಲೆ ರೂ.1255/- ಎಂದು ನಮೂದಾಗಿದ್ದರಿಂದ ಒಟ್ಟು ಚೀಲಗಳ ಬೆಲೆ ರೂ.3,73,990/- ಆಗುತ್ತದೆ. ಸದರಿ ಬೆಲೆಯನ್ನು ಚೀಲದ ಮೂಲೆಯಲ್ಲಿ ನಮೂದು ಮಾಡಲಾಗಿತ್ತು. ಸದರಿ ಲಾರಿಯನ್ನು ಠಾಣೆಗೆ ಸದರಿ ಚಾಲಕ ತಂದಿರುತ್ತಾರೆ. ನಾನು ಹಾಗೂ ಚಾಸಾ 1 ರವರು ಮರಳಿ ಠಾಣೆಗೆ ನಾವು ಹೋಗಿದ್ದಂತಹ ಸದರಿ ಖಾಸಗಿ ಕಾರಿನಲ್ಲಿ ಬಂದಿರುತ್ತೇವೆ. ನಾನು ಹಾಗೂ ಚಾಸಾ 1 ರವರು ಒಂದೇ ಕಾರನ್ನು ತೆಗೆದುಕೊಂಡು ಹೊಗಿರುತ್ತೇವೆ. ಒಂದೆ ಕಾರಿನಲ್ಲಿ ನಾವು ಒಟ್ಟು 7 ಜನ ಹೋಗಿರುತ್ತೇವೆ ಹಾಗೂ ಮರಳಿ ಬರುವಾಗಲೂ ಕೂಡಾ ನಾವು 7 ಜನ ಸದರಿ ಕಾರಿನಲ್ಲೇ ಬಂದಿರುತ್ತೇವೆ ಎಂದರೆ ಸರಿ. ಸ್ಥಳದಲ್ಲಿ ಯಾವುದೇ ಸಾರ್ವಜನಿಕರು ಸೇರಿರಲಿಲ್ಲ. ಕೋಡಮನಳ್ಳಿ ಕ್ರಾಸನ ವಿರುದ್ಧ ದಿಕ್ಕಿನಲ್ಲಿ ಸದರಿ ಲಾರಿಯನ್ನು ನಿಲ್ಲಿಸಲಾಗಿತ್ತು. ಸದರಿ ಲಾರಿಯ ಪೂರ್ವ ದಿಕ್ಕಿಗೆ ಕೋಡಮನಳ್ಳಿ ಗ್ರಾಮ, ದಕ್ಷಿಣಕ್ಕೆ ಶಹಾಪೂರ, ಉತ್ತರಕ್ಕೆ ಗುಲ್ಬರ್ಗಾ ಹಾಗೂ ಪಶ್ಚಿಮಕ್ಕೆ ಸಾದ್ಯಾಪೂರ ಗ್ರಾಮ ಬರುತ್ತವೆ. ಸದರಿ ಪಂಚನಾಮೆಯನ್ನು ಮಾಡುವ ಸಮಯದಲ್ಲಿ ಪೊಟೋಗಳನ್ನು ತೆಗೆಯಲಾಗಿದ್ದು ಆದರೆ ಯಾರು ತೆಗೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. 298 ಚೀಲಗಳನ್ನು ಸದರಿ ಲಾರಿಯಲ್ಲಿ ಠಾಣೆಗೆ ತೆಗೆದುಕೊಂಡು ಬರಲಾಗಿರುತ್ತದೆ. ನಾನು ಹಾಗೂ ಚಾಸಾ1 ರವರು ಸೇರಿ ಸದರಿ ಚೀಲಗಳನ್ನು ಏಣಿಸಿರುತ್ತೇವೆ. ಸಾಕ್ಷಿಗೆ ಈಗ ಸದರಿ ಚೀಲಗಳನ್ನು ತೂಕ ಮಾಡಿಸಲು ಯಾರಿಗಾದರೂ ಕರೆಸಿರುತ್ತಾರೆ ಎಂದು ಕೇಳಿದ್ದಕ್ಕೆ ಸಾಕ್ಷಿ ಸದರಿ ಪೊಲೀಸ್ ಠಾಣೆಯಲ್ಲಿ ತೂಕದ ಮಶೀನ ಇತ್ತು ಎಂದು ಹೇಳುತ್ತಾರೆ. ಸದರಿ ಠಾಣೆಯಲ್ಲಿ ಸದರಿ ಮಶೀನ ಇತ್ತು ಎಂದು ಹೇಳಲು ಯಾವುದೇ ರಶೀದಿಯನ್ನು ನಾನು ನೋಡಿರುವುದಿಲ್ಲ. ಸದರಿ ಗೊಬ್ಬರದ ಚೀಲಗಳ ಯಾರಿಗೆ ಸಂಬಂದಿಸಿದ್ದವು ಎಂದು ನನಗೆ

ಗೊತ್ತಿರುವುದಿಲ್ಲ ಹಾಗೂ ಅವುಗಳನ್ನು ಯಾರಿಂದ ತೆಗೆದುಕೊಂಡು ಬರಲಾಗಿರುತ್ತದೆ ಎಂದು ಗೊತ್ತಿರುವುದಿಲ್ಲ. ನಾನು ಸದರಿ ಮಲ್ಲಿನಾಥ ದ್ಯಾಮಗೊಂಡ ಇವರ ಗೋಡಾನಿಗೆ ಹೋಗಿರುವುದಿಲ್ಲ. ನನಗೆ ಸದರಿ ಮಲ್ಲಿನಾಥ ದ್ಯಾವಮಗೊಂಡ ಇವರ ಒಂದು ಅಂಗಡಿ ಮೂಡಬುಳ ಗ್ರಾಮದಲ್ಲಿದ್ದು ಅವರ ಅಂಗಡಿಯಲ್ಲಿಯೇ ಅವರು ರಸಗೊಬ್ಬರದ ಮಾರಾಟ ಮಾಡುತ್ತಾರೆ. ನನ್ನ ಹತ್ತಿರ ಸದರಿ ಮಲ್ಲಿನಾಥ ಇವರ ಮೊಬೈಲ ನಂಬರ ಇದ್ದು ನನಗೆ ಹೇಳಲು ನೆನಪಿರುವುದಿಲ್ಲ. ಸದರಿ ಮಲ್ಲಿನಾಥ ಇವರ ಸದರಿ ಅಂಗಡಿ ನಮ್ಮ ಇಲಾಖೆಯ ವ್ಯಾಪ್ತಿಗೆ ಬರುತ್ತದೆ. ನಾನು ಸದರಿ ಮಲ್ಲಿನಾಥ ದ್ಯಾಮಗೊಂಡ ಇವರ ಅಂಗಡಿಯಲ್ಲಿದ್ದ stock register ನ್ನು ಪರಿಶೀಲನೆ ಮಾಡಿರುವುದಿಲ್ಲ. ನಾನು ಸದರಿ ಮಲ್ಲಿನಾಥ ದ್ಯಾಮಗೊಂಡ ಇವರ ಅಂಗಡಿಗೆ ಹೋಗಿ ಅದು ಯಾರ ಹೆಸರಿನಲ್ಲಿರುತ್ತದೆ ಹಾಗೂ ಅದರ ಮಾಲಿಕರು ಯಾರು ಎಂದು ನಾನು ವಿಚಾರಿಸಿರುವುದಿಲ್ಲ. ಸದರಿ ಚಾಲಕನ ಉಳಿದ ಆರೋಪಿತರ ಹೆಸರುಗಳು ಹೇಳಿದ್ದರ ಮೆರೆಗೆ ನನಗೆ ತಿಳಿದು ಬಂದಿರುತ್ತದೆ ಎಂದರೆ ಸರಿ. ಮತ್ತೆ ಪೊಲೀಸರು ನನಗೆ ಠಾಣೆಗೆ ದಿಃ 17-08-2020 ರಂದು ಕರೆದಿರುತ್ತಾರೆ. ದಿಃ 17-08-2020 ರಂದು ಪೊಲೀಸರು ಠಾಣೆಗೆ 3 ಜನರನ್ನು ಕರೆಸಿರುತ್ತಾರೆ. ಸದರಿ ಮೂರು ಜನರನ್ನು ಕರೆದುಕೊಂಡು ಬಂದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ ಆದರೆ ಪೊಲೀಸರು ಕರೆದುಕೊಂಡು ಬಂದಿರುತ್ತಾರೆ. ಸದರಿ 3 ಜನರನ್ನು ಕರೆಸಿದಾಗ ಸಮಯ ಸಾಯಂಕಾಲ 4.00 ಗಂಟೆ ಆಗಿತ್ತು. ಸದರಿ 3 ಜನರನ್ನು ಹೊರತುಪಡಿಸಿದರೆ ಠಾಣೆಯಲ್ಲಿ ನಾನು ಹಾಗೂ ಪೊಲೀಸ್ ಸಿಬ್ಬಂದಿಗಳು ಇದ್ದೇವು. ಸದರಿ 3 ಜನರು ಎಂದರೆ ಸುಜಾತಾ, ರಘು ದೇಸಾಯಿ ಹಾಗೂ ಹನಮಂತ್ರಾಯ ಮೇಟಿ. ಸದರಿ 3 ಜನರು ಠಾಣೆಯ ಗಣಕಯಂತ್ರದ ಕೋಣೆಯಲ್ಲಿದ್ದರು. ಸದರಿ ಮೂರು ಜನರನ್ನು ಗುರುತಿಸಿ ಪಂಚನಾಮೆಯಾದ ನಂತರ ನಾನು ಹೋಗಿರುತ್ತೇನೆ ಹಾಗೂ ಮುಂದೆ ಪ್ರಕರಣದಲ್ಲಿ ಏನಾಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ. ದಿಃ 15-08-2020 ರಂದು ನಾನು ಕರ್ತವ್ಯದಲ್ಲಿದ್ದಾಗ ನಮ್ಮ ಹಿರಿಯ ಅಧಿಕಾರಿಗಳಾದ ಗೌತಮ ಇವರು

ಚಾಸಾ1 ರವರಿಗೆ ಸದರಿ ರಸಗೊಬ್ಬರದ ಸಾಗಾಟ ಮಾಡಲಾಗುತ್ತಿದೆ ಎಂದು ಹೇಳಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮೇಲಾಧಿಕಾರಿಗಳ ಮಾತನ್ನು ಕೇಳಿಕೊಂಡು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸದರಿ ದಿನದಂದು ಕರ್ತವ್ಯದಲ್ಲಿರದ ಕಾರಣ ನಾನು ನನ್ನ ಹಾಜರಾತಿ ಪ್ರಮಾಣ ಪತ್ರವನ್ನು ಪ್ರಸ್ತುತ ಪ್ರಕರಣದಲ್ಲಿ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಿನದಂದು ನಾನು ಕೋಡಮನಳ್ಳಿ ಕ್ರಾಸಗೆ ಹೋಗಿದ್ದು ಹಾಗೂ ಸದರಿ ಲಾರಿಯಲ್ಲಿ ಸುಮಾರು 298 ರಸಗೊಬ್ಬರದ ಚೀಲಗಳು ಇದ್ದವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ರಸಗೊಬ್ಬರದ ಚೀಲಗಳನ್ನು ಮಲ್ಲಿನಾಥ ಇವರ ಗೋದಾಮಿನಿಂದ ಲೋಡ ಮಾಡಿಕೊಂಡು ಬರಲಾಗುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚರ ಸಮಕ್ಷಮ ರಾಸಾಯನಿಕ ಪರೀಕೆಗಾಗಿ ರಸಗೋಬ್ಬರವನ್ನು ಅಮಾನತ್ತುಡಿಪಸಿಕೊಂಡು ಅದನ್ನು ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೂ ಹಾಗೂ ಪ್ರಸ್ತುತ ಪ್ರಕರಣಕ್ಕೂ  ಯಾವುದೇ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸುಳ್ಳಾಗಿರುತ್ತವೆ ಎಂದರೆ ಸರಿಯಲ್ಲ.

**1, 3 ಮತ್ತು 4 ನೇ ಆರೋಪಿತರ ಮಾನ್ಯ ವಕೀಲರು 2 ನೇ ಆರೋಪಿತ ಪರ ಮಾನ್ಯ ವಕೀಲರು ಮಾಡಿರುವ ಪಾಟಿ ಸವಾಲನ್ನು ಅನುಮೋದನೆ ಮಾಡಿಕೊಳ್ಳಲು ಕೇಳಿಕೊಂಡಿರುತ್ತಾರೆ.**

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ.ಇದೆ.

ಹಿರಿಯ ಸಿವಿಲ್
ನ್ಯಾಯಾಧೀಶರು,
ಶಹಾಪೂರ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾದಂ.ನ್ಯಾಯಾಲಯ,

ಶಹಾಪೂರ.

ಸಿ.ಡಬ್ಲ್ಯೂ 12 ಪಿ.ಡಬ್ಲ್ಯೂ10

ಸಿ.ಸಿ. ನಂ. 59/2021

| | |
|---|---|
| ಹೆಸರು | ಃ ಮಲ್ಲಿನಾಥ |
| ತಂದೆ ಹೆಸರು | ಃ ಪರಮೇಶ್ವರ |
| ವಯಸ್ಸು | ಃ 56 ವರ್ಷ |
| ಉದ್ಯೋಗ | ಃ ASI Gogi PS |
| ವಾಸ | ಃ ಗೋಗಿ |

ದಿನಾಂಕಃ 23-02-2026
ಸಾಕ್ಷಿಗೆ ಪ್ರತಿಜ್ಞಾವಿಧಿ ಬೋಧಿಸಲಾಯಿತು.
ಮುಖ್ಯ ವಿಚಾರಣೆ ಃ ಸಹಾಯಕ ಸರಕಾರಿ ಅಭಿಯೋಜಕರವರಿಂದ ಃ

ನಾನು 2015 ರಿಂದ 2021 ರವರೆಗೆ ಭೀಮರಾಯನಗುಡಿ ಪೊಲೀಸ್ ಠಾಣೆಯಲ್ಲಿ HC ಆಗಿ ಕಾರ್ಯನಿರ್ವಹಿಸಿರುತ್ತೇನೆ.

2. ದಿನಾಂಕ 16-08-2020 ರಂದು ನಾನು ಚಾಸಾ7 ರವರ ಆದೇಶದ ಮೇರೆಗೆ ಮುದ್ದೆ ಮಾಲನ್ನು ಬೆಳಗಾವಿಯ FSL ಗೆ ತೆಗೆದುಕೊಂಡು ಹೋಗಿದ್ದು ದಿಃ 30-08-2020 ರಂದು ವರದಿಯನ್ನು ಅವರಿಗೆ ತಂದು ಸಲ್ಲಿಸಿರುತ್ತೇನೆ. ಸಾಕ್ಷಿ ಸದರಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.5 ಎಂದು ಗುರುತಿಸಲಾಗಿರುತ್ತದೆ.

**ಪಾಟಿ ಸವಾಲುಃ 2 ನೇ ಆರೋಪಿ ಪರಃ ಶ್ರೀ TN ಮಾನ್ಯ ವಕೀಲರಿಂದಃ**

**3.** ಸದರಿ ದಿನದಂದು ನಾನು ಚಾಸಾ7 ರವರ ಆದೇಶದ ಮೇರೆಗೆ ಮುದ್ದೆ ಮಾಲನ್ನು ಬೆಳಗಾವಿಯ FLS ಗೆ ಹೋಗಿ ದಿಃ 30-08-2020 ರಂದು ನಿಪಿ.5 ರಂತೆ ವರದಿಯನ್ನು ಸಲ್ಲಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 3 ಮತ್ತು 4 ನೇ ಆರೋಪಿತರ ಪರಃ</u>**

3 ಮತ್ತು 4 ನೇ ಆರೋಪಿತರ ಪರ ವಕೀಲರು 2 ನೇ ಆರೋಪಿತರ ಪರ ಮಾಡಿದ ಪಾಟಿ ಸವಾಲನ್ನೇ ಅನುಮೊದಿಸಿಕೊಳ್ಳಲು ವಿನಂತಿಸಿಕೊಂಡಿರುತ್ತಾರೆ.

**<u>ಮರು ವಿಚಾರಣೆಃ ಇಲ್ಲ.</u>**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,

ಶಹಾಪೂರ.